# ಪುಟ್ಟಮ್ಮಜ್ಜಿಯ ರವಿಕೆ

ವರದರಾಜ, ಹುಚ್ಚೇಗೌಡನನ್ನು ಸಿಟಿಯಲ್ಲಿ ಹಲವಾರು ಅಂಗಡಿ ಅಲೆಸಿ ಕೊನೆಗೆ ಆ ಮಾಲ್‌ಗೆ ಬರುವ ವೇಳೆಗೆ ಮಧ್ಯಾಹ್ನ ಎರಡು ಗಂಟೆ ಆಗಿತ್ತು. ಅಲ್ಲಿ ಕೊನೆಗೂ ವರದರಾಜನ ಮನಸ್ಸಿನಲ್ಲಿದ್ದ ಇತ್ತೀಚಿನ ಫ್ಯಾಷನ್ನಿನ ಡ್ರೆಸ್ಸನ್ನು ಹುಚ್ಚೇಗೌಡನಿಗಾಗಿ ಸೆಲೆಕ್ಟ್ ಮಾಡಲು ಸಾಧ್ಯವಾಗಿತ್ತು.

ಕಾಲರ್ ಇಲ್ಲದ ಕಡುನೀಲಿ ಬಣ್ಣದ ತುಂಬು ತೋಳಿನ ಶರ್ಟು ಧರಿಸಿ, ಕುತ್ತಿಗೆವರೆಗೂ ಬಟನ್ ಹಾಕಿಕೊಂಡು ಬಿಸ್ಕೆಟ್ ಕಲರ್ ಪ್ಯಾಂಟು ಏರಿಸಿ, ಸೊಂಟಕ್ಕೆ ಬೆಲ್ಟ್ ಬಿಗಿದು ಡ್ರೆಸ್ಸಿಂಗ್ ರೂಮಿನಿಂದ ಹೊರಬಂದ ಹುಚ್ಚೇಗೌಡನ ಕಡೆ ಮೆಚ್ಚುಗೆ ನೋಟ ಬೀರುತ್ತಾ ವರದರಾಜ 'ಈಗ ಸರಿಯಾಯಿತು ಗೌಡ್ರೇ. ಫೇಮಸ್ಸಾದ ವ್ಯಕ್ತಿಗಳೆಲ್ಲಾ ಈಗ ಇದೇ ತರದ ಡ್ರೆಸ್ ಹಾಕುವುದು' ಎಂದ.

ಸೇಲ್ಸ್ ಹುಡುಗಿ ಅವನ ಕೈಲಿದ್ದ ಹಳೆಯ ಬಟ್ಟೆ ತೆಗೆದುಕೊಂಡು ಬ್ಯಾಗಿನಲ್ಲಿ ತುರುಕುತ್ತಾ 'ವೆರಿ ನೈಸ್ ಸೆಲೆಕ್ಷನ್' ಎಂದು ತಾರೀಫ್ ಮಾಡಿದಾಗ ಹುಚ್ಚೇಗೌಡ ಉಬ್ಬಿಹೋಗಿದ್ದ.

ಅಲ್ಲಿಂದ ಸೀದಾ ಮಾಮೂಲಿನಂತೆ 'ನಕ್ಷತ್ರ' ಹೋಟೆಲಿಗೆ ಹೋಗಿ ಗೆಳೆಯನಿಗೆ ಅರ್ಧ ಕ್ವಾರ್ಟರ್ ರಮ್ ಜೊತೆಗೆ ಹಂದಿ ಮಾಂಸದ ಫ್ರೈ ಕೊಡಿಸಿ ಅವನೊಂದಿಗೆ ತಾನೂ ಊಟ ಮಾಡಿ ಅವನನ್ನು ಬೀಳ್ಕೊಟ್ಟು, ತಾನು ದಶಕಗಳ ಕಾಲ ಕನ್ನಡ ಉಪನ್ಯಾಸಕನಾಗಿ ಕೆಲಸ ಮಾಡಿ ಕೊನೆಯಲ್ಲಿ ಕೆಲ ತಿಂಗಳು ಪ್ರಿನ್ಸಿಪಾಲ್ ಆಗಿ ನಿವೃತ್ತಿ ಹೊಂದಿದ್ದ ಜೂನಿಯರ್ ಕಾಲೇಜು ಕಡೆ ಹೆಜ್ಜೆ ಹಾಕಿದ್ದ.

ವರದರಾಜನ ಸಲಹೆಯ ಮೇರೆಗೆ ಹಿಂದಿನ ದಿನವಷ್ಟೇ ನುಣ್ಣಗೆ ಶೇವ್ ಮಾಡಿಸಿ ತಲೆಕೂದಲಿಗೆ ಹೇರ್ ಡೈ ಮಾಡಿಸಿದ್ದ ಅವನು ಹೊಸ ಡ್ರೆಸ್‌ನಲ್ಲಿ ಸ್ಟಾಫ್ ರೂಮಿಗೆ ಹೆಜ್ಜೆ ಇಟ್ಟಾಗ ಅಲ್ಲಿದ್ದ ಎಲ್ಲರೂ ಅವನೆಡೆಗೆ ಮೆಚ್ಚುಗೆಯ ನೋಟ ಹರಿಸಿದ್ದರು. ಹಿಂದಿ ಮೇಡಮ್ ರಮಾಮಣಿಯಂತೂ 'ಇದೇನ್ ಹಿಂಗೆ ಹುಡುಗ್ರ ಹಂಗೆ ಮಿಂಚ್ತಾ ಇದೀರಿ. ಮತ್ತೇನಾದ್ರೂ ಡ್ಯೂಟಿಗೆ ರಿಪೋರ್ಟ್ ಮಾಡಿಕೊಳ್ಳೋಕೆ ಬಂದ್ರಾ ಹೆಂಗೆ?' ಎಂದು ಕಣ್ಣರಳಿಸಿ ಕೀಟಲೆ ಮಾಡಿದ್ದಳು.

ಅಲ್ಲಿಂದ ಹೊರಡುವಾಗ ಅವಳು 'ಜೋಪಾನ ಸಾರ್. ಆ ಸಿಲ್ವರ್ ಜ್ಯುಬಿಲಿ ಪಾರ್ಕ್ ಕಡೆ ಏನಾದ್ರೂ ಹೋಗಿಬಿಟ್ಟೀರಿ, ಜನರ ದೃಷ್ಟಿ ಬಿದ್ದುಬಿಟ್ಟೀತು. ವಾಕ್ ಬಂದ ಯಾರಾದ್ರೂ ಆಂಟೀರು ಹಿಂದೆ ಬಿದ್ದುಬಿಟ್ಟಾರು' ಎಂದು ತಮಾಷೆ ಮಾಡಿ ಕಳಿಸಿಕೊಟ್ಟಿದ್ದಳು.

* * *

ಸಾಹಿತಿಯಾಗಬೇಕೆಂಬ ಹುಚ್ಚು ಇತ್ತೀಚೆಗಷ್ಟೇ, ಅಂದರೆ ನಿವೃತ್ತಿ ಹೊಂದಿದ ಮೇಲೆ ಹುಚ್ಚೇಗೌಡನಿಗೆ ಹತ್ತಿಕೊಂಡುಬಿಟ್ಟಿತ್ತು.

ಕನ್ನಡ ಎಂ.ಎ ಮುಗಿಸಿ ಜೂನಿಯರ್ ಕಾಲೇಜಿನ ಲೆಕ್ಚರರ್ ಆದ ಲಾಗಾಯ್ತು ಇತ್ತೀಚೆಗೆ ಪ್ರಿನ್ಸಿಪಾಲ್ ಆಗಿ ರಿಟೈರ್ ಆಗುವವರೆಗೂ ಅವನಿಗೆ ಸಾಹಿತ್ಯದ ಬಗ್ಗೆ ಯೋಚಿಸಲು ಬಿಡುವೇ ಆಗಿರಲಿಲ್ಲ.

ತಾನೊಬ್ಬ ಕಾಲೇಜು ಉಪನ್ಯಾಸಕ ಎಂಬ ಹಮ್ಮು. ಎಲ್ಲಾ ಗೆಜೆಟೆಡ್ ಅಧಿಕಾರಿಗಳ ಸರಿಸಮ ತಿರುಗಾಡಬೇಕು. ಆಫೀಸರ್ಸ್ ಕ್ಲಬ್ಬಿನಲ್ಲಿ ಕುಳಿತು ಅಧಿಕಾರಿಗಳೊಂದಿಗೆ ಇಸ್ಪೀಟ್ ಆಡಬೇಕು. ನಗರದ ಯಾವುದಾದರೂ ಬಡಾವಣೆಯಲ್ಲಿ ಸೈಟು ಕೊಂಡು ಬಂಗಲೆಯಂಥಾ ಮನೆ ಕಟ್ಟಿಸಬೇಕು ಎಂಬಿವೇ ವಿಚಾರಗಳು ಅವನ ತಲೆಯಲ್ಲಿ ತುಂಬಿಕೊಂಡಿದ್ದವು...

ಅವನು ಮಲೆನಾಡ ಮೂಲೆಯ ಗೊಬ್ಬೆಗುಂಡಿ